ದಿನ ಪತ್ರಿಕೆ

Reg No. M 1299
Daily & Weekly

This Space is available for Advt.

SATYAVADI Oldest Newspaper of Mysore

ಸತ್ಯವಾದಿ

ಸಂಪುಟ 26 ಸಂಚಿಕೆ 309] ಸೋಮವಾರ 24—5—1943 [3 ಪೈ

Opera — Aryamala

ಅಪೆರಾ——

2 ನೇ ಅನೋಘ ವಾರ

ಆರ್ಯಮಾಲ

ಪಿ. ಯು. ಚಿನ್ನಪ್ಪ ಸಂತಾನಲಕ್ಷ್ಮಿ
ಶಕುಂತಲ ಕೃಷ್ಣಪ್ಪ, ಮಧುರಂ
ಮುಂತಾದವರು ಪಾತ್ರವಹಿಸಿರುವರು

ಯುದ್ಧವಾರ್ತೆ

ಯುದ್ಧವು ಬಹಳ ದಿವಸ ನಡೆಯುವುದು, ಬೇಗನೇ ಮುಗಿಯುವ ಹಾಗಿಲ್ಲ ಎಂದು ಮಿ॥ ಚರ್ಚಿಲ್ಲರು ವಾಷಿಂಗ್ಟನ್ನಿನಲ್ಲಿ ಹೇಳಿರುವರು.

ಯೂರೋಪಿನಲ್ಲಿ ಎರಡನೇ ರಣರಂಗವು ನಾರ್ವೆಯಲ್ಲಿ ಆಗುವ ಸಂಭವವಿದೆ. ಈ ವಿಷಯದಲ್ಲಿ ವಾಷಿಂಗ್ಟನ್ನಿನ ನಿರ್ಣಯವನ್ನು ಎಲ್ಲರು ನೋಡುತ್ತಿರುವರು

ಜಪಾನೀಯರು ಪೆರಲ್ ಹಾರ್ಬರಿನಲ್ಲಿ 22 ಹಡಗುಗಳನ್ನು ಮುಳುಗಿಸಿದ್ದರಷ್ಟೆ. ಈಗ ಅಮೇರಿಕಾದವರು ಅವುಗಳಲ್ಲಿ 7 ಯುದ್ಧ ನೌಕೆಯನ್ನು ನೀರಿನ ಮೇಲಕ್ಕೆ ಎತ್ತಿರುವರು,

ಭಾರತಕ್ಕೆ ಜಪಾನರ ಭಯವಿಲ್ಲವೆಂದು ಐ. ವಿ. ಎಫ್. ಪ್ಯಾಕ್ವರ್ಡ್ ಲೀಡರ್ ರಮಿಂದಾರ್ ಸಿಂಗರು ಹೇಳುತ್ತಾರೆ.

ಟ್ಯುನಿಷಿಯಾ ರಣರಂಗದಲ್ಲಾದ ಯುದ್ಧದಿಂದ ಹಿಟ್ಲರು ಕ್ಷೀಣದೆಸೆಗೆ ಬಂದಿರುವನೆಂದು ಸಂದೇಹವಿಲ್ಲವೆಂದು ಜನರಲ್ ಜೀರೋರವರು ಹೇಳಿರುವರು.

ಆಟ್ಲಾ ದ್ವೀಪದಲ್ಲಿ ಅಮೇರಿಕದವರು ಜಪಾನೀ ಸೇನೆಗಳನ್ನು ಮೂರು ಕಡೆಯಲ್ಲಿಯೂ ಸುತ್ತಿಗಟ್ಟಿರುವರು.

ನಿನ್ನೆಯಿಂದ ಇಟಲಿಯ ಮೇಲೆ ಮಿತ್ರವಿಮಾನಗಳು ಹೊಸಹೊಸ ಸ್ಥಾನಗಳ ಮೇಲೆ ಧಾಳಿ ಮಾಡುತ್ತಿರುವವು. ಆ ಕ್ಷೇತ್ರದಲ್ಲಿ 7 ಶತ್ರು ವಿಮಾನಗಳು ನಾಶವಾಗಿವೆ.

Edited, Printed & published by M. S. Krishna Rao, at the Satyavadi Press. Chamaraja Agrahar, Mysore.

ವರ್ತಮಾನ ಸಂಗ್ರಹ

ನಿನ್ನೆ ಇಂಗ್ಲೆಂಡಿನ ದಕ್ಷಿಣ ಭಾಗದಲ್ಲಿ ಜರ್ಮನಿ ಧಾಳಿಯಾಯಿತು. ಅನೇಕರು ಸತ್ತರು. ಶತ್ರುಗಳ 3 ವಿಮಾನ ಸೆಲಕ್ಕೆ ಉರುಳಿಸಲಾಯಿತು.

ನಿನ್ನೆ ದಿವಸ ಕೈರೋದಲ್ಲಿ ಸೇನೆಗಳ ಪೆರೇಡ್ ನಡೆಯಿತು. ಸುಮಾರು 6000 ಸೇನೆಗಳು ಭಾಗವಹಿಸಿದ್ದರು.

ಕೈರೋದಲ್ಲಿ ಆಲ್‌ಮಿಯನ್ ಕ್ಲಬ್ ಸ್ಥಾಪಿತವಾಗಿದೆ. ಇದು ಸೇನೆಗಳು ತಂಗುವುದಕ್ಕೆ ಅನುಕೂಲವಾಗುವುದು. ಇದಕ್ಕೆ ಈಗಾಗಲೇ 400 ಪೌಂಡು ವಸೂಲಾಗಿದೆ..

ಟುನಿಷಿಯಾದಲ್ಲಿ ಜರ್ಮನಿಗೆ ಸಹಾಯಮಾಡಿ ದೇಶದ್ರೋಹ ಮಾಡಿದವರು ಸುಮಾರು 1000 ಜನರನ್ನು ಮಿತ್ರಪಕ್ಷದವರು ಸೆರೆ ಹಿಡಿದಿರುತ್ತಾರೆ.

ಫ್ರಾನ್ಸ್‌ನಲ್ಲಿರುವ ಎಲ್ಲಾ ಯುವಕರು 18 ರಿಂದ 21 ವರ್ಷದ ವಯಸ್ಸಿನವರೆಲ್ಲರೂ ಜರ್ಮನಿಗೆ ಕಲಸಕ್ಕೆ ಒರಲು ಸಿದ್ಧರಾಗಬೇಕೆಂದು ಹಿಟ್ಲರಿನ ಆಜ್ಞೆ ಆಗಿದೆ

ನಿನ್ನೆ ಬ್ರಿಟಿಷರು ಮಾಡಿದ ಧಾಳಿಯಲ್ಲಿ ಬೆಲ್ಜಿಯಂನಲ್ಲಿ ಸ್ಟೀಲ್ ಕಾರ್ಖಾನೆಗಳು ಪುಡಿಪುಡಿಯಾದವು

ಬಿಟಗಾಂಗ್ ಪ್ರಾಂತ್ಯದಲ್ಲಿ ನಿನ್ನೆ 7 ಜಪಾನಿಯರ ವಿಮಾನವನ್ನು ಬ್ರಿಟಿಷ ವಿಮಾನಗಳು ನಾಶಮಾಡಿದೆ. ನಮ್ಮ ನಷ್ಟ ಎರಡು ವಿಮಾನಗಳು. ಶತ್ರುಗಳು 31 ವಿಮಾನ ತಂದಿದ್ದರು. ಸ್ವಲ್ಪ ಸಾವು ಆಗಿದೆ.

ಯೂರೋಪಿನಲ್ಲಿ ಅಮೇರಿಕಾ ಸೈನ್ಯಗಳ ಮುಖ್ಯ ಸೇನಾನಾಯಕರು ಹಿಟ್ಲರನ್ನು ನಾಶಮಾಡಲು ಸಿದ್ಧತೆ ಮಾಡಿರುವುದೆಂದು.

ಕಾಂಗ್ರೆಸ್ ಮೇಲೆ ಆಪಾದನೆ

ಸರ್ ಟೇಜ್ ಬಹದ್ದೂರ್ ಸಪ್ರು ಡಾ॥ ಎಂ. ಆರ್. ಜಯಕರ್, ಡಾ॥ ಸುಚೀಂದ್ರನಾಥಸಿನ್ಹ, ಸರ್ ಚಾಮರ್ತಿ ವೆಂಕಟೇಶ್ವರಾಚಾರ್ಯ ಮತ್ತು ಶ್ರೀನಿವಾಸ ಶಾಸ್ತ್ರಿ ಎಂಬ ಮಹನೀಯರು ಕಾಂಗ್ರೆಸ್ ಮೇಲೆ ಆಪಾದನೆ ಹೊರಿಸಿರುವರು. ಅವರು ಹೇಳಿರುವ ಮುಖ್ಯ ಆಪಾದನೆಗಳು ಹೀಗಿವೆ:—

ಸರ್ ಟೇಜ್ ಬಹದ್ದೂರ್ ಸಪ್ರು, ಡಾ॥ ಜಯಕರ್, ಡಾ॥ ಸಚ್ಚಿದಾನಂದ ಸಿನ್ಹ, ಸರ್ ಜಗದೀಶ್ ಪ್ರಸಾದರು "ಸ್ವಾರ್ಥದವರು ಒಂದು ವಿಚಾರಣ ಸಮಿತಿ ಏರ್ಪಾಡು ಮಾಡಬೇಕು, ಮುಂಡರು ಈಗ ಬಂಧನದಲ್ಲಿರುತ್ತಾರೆ. ಇವನ್ನು ಬಿಟ್ಟುಬಿಡಿ ಇದರಿಂದ ಅನುಮಾನ ದೇಶಸ್ಥಿತಿ ನೋಡಿ ಮುಂದಿನ ವಾತಾವರಣವನ್ನು ಸರಿಪಡಿಸುವರು. ನಾವು ಕೇಳುವುದು ನ್ಯಾಯವನ್ನಲ್ಲದೆ ಮತ್ತೇನು ಇಲ್ಲ. ಸರ್ಕಾರದವರು ಸುಮ್ಮನೆ ಇದ್ದರೆ ಇದರಿಂದ ದೇಶಕ್ಕೆ ಏನೂ ಪ್ರಯೋಜನವಾಗಲಾರದು ಎಂದು ದೊಡ್ಡ ನಿವೇದನಾಪತ್ರ ಪ್ರಕಟಿಸಿರುತ್ತಾರೆ.

ಬಟ್ಟೆಬರೆಗಳಿಗೆ ಅಸಾಧ್ಯ ಧಾರಣೆ

ಬಟ್ಟೆ ಬರೆಗಳ ದರಗಳು ಒಂದಕ್ಕೆ ಐದುಪಾಲು ಹೆಚ್ಚಿವೆ. ಆಶನಕ್ಕೆ ಎರಡನೇಯದಾಗಿ ವಸನವಿದೆ. ಬಟ್ಟೆ ಬರೆಗಳು ಧನಿಕರಿಗೂ ಬೇಕು, ಬಡವರಿಗೂ ಬೇಕು. ಸಾಮಾನ್ಯ ತರಗತಿಯ ಪ್ರಜೆಯ ಜೀವನವು ಕಷ್ಟತಮವಾಗಿದೆ. ಈ ಯುದ್ಧವು ತಂದ ಮಹಾ ಕಷ್ಟಗಳಲ್ಲಿ ಬಟ್ಟೆಯ ಕೊರತೆ ಅಸಾಧ್ಯ ಧಾರಣೆ ಇವು ಸಹನಾತೀತ ಜಪೆ. ಬೊಂಬಾಯಿಯ ಗಿರಣಿ ಮೂಲಕ ಸಂಘದವರು ಹೊರಡಿಸಿದ ವರದಿಯಂತೆಯೇ ಇಲ್ಲಿ ತಯಾರಾಗುವ ಬಟ್ಟೆಗಳ ಧಾರಣೆಗಳ ವಿವರ ಹೀಗಿವೆ—

	18-[illegible]39	13-3-1942	12-3-1943
ಲಾಂಗ್ ಕ್ಲಾತ್	0—8—6	1—2—10	2—4—6
ಶರ್ಟಿಂಗ್	0—8—5	1—1—9	2—6—3
ಲೆನ್ಸ್‌ಡೌನ್ ಕ್ಲಾತ್	0—8—2	1—2—1	2—5—0
ಧೋತಿ	0—9—6	1—2—0	2—10—0
ಫ್ಲಡ್ಸರ್	0—8—9	1—3—2	2—9—3
ಡ್ರಿಲ್	0—7—6	1—1—0	2—5—0

(ಈ ದರಗಳು ಒಂದು ರಾಷ್ಟ್ರಿನವು)

ಪ್ರಯಾಣ ನಿಲ್ಲಿಸಿ

ಈಗ ಎಲ್ಲೆಲ್ಲೂ ಪ್ರಯಾಣ ಕಮ್ಮಿ ಮಾಡಿ ಎನ್ನುವ ಕಾಲ ಒಂದಿದೆ ಹಿಂದೆ, 4—5 ವರ್ಷಗಳ ಹಿಂದೆ, ಸೀಲಗಿರಿಗೆ ಹೋಗಿ, ನಂದಿ ಬೆಟ್ಟಕ್ಕೆ ಹೋಗಿ, ಕಾಶ್ಮೀರಕ್ಕೆ ಹೋಗಿ, ರೈಲ್ವೆ ಫೇರ್ ಅರ್ಧ. ಬಳ್ಳೇ ಹೋಟಲ್‌ಗಳಿವೆ, ನೋಡುವಂಥ ರಮ್ಯ ಸ್ಥಳಗಳಿವೆ, ಎನ್ನುತ್ತಿದ್ದರು. ಈಗ ಎಲ್ಲರಿಗೂ ನಾವು ಹೇಳುವ ಈ ಉಪದೇಶವನ್ನು ಯಾಕೆ ಕೇಳಕೂಡದು—ನೀವು ವಿರಾಮವನ್ನು ಸುಖವಾಗಿ, ಖರ್ಚಿಲ್ಲದೆ, ಯಾರ ಹಂಗಿಲ್ಲದೆ ನಿಮ್ಮ ಮನೆ ಊಟಮಾಡಿಕೊಂಡು ನಿಮ್ಮ ಅಂಗಳದಲ್ಲಿ ಒಂದು ಡೇರಾ (Tent) ಹಾಕಿಕೊಂಡು ಕಾಲವನ್ನೇಕೆ ಕಳೆಯಬಾರದು?

"ನುಲ್ಲ"

ಹಿಂದೂಸ್ಥಾನದ ಸಂಪತ್ತು

ಅಕ್ಕಿ—

ಭಾರತವು 1578000 ಚದರ ಮೈಲಿ ಉಳ್ಳದ್ದಾಗಿದೆ. ಇದು ಅಮೆರಿಕಾದ ಸಂಯುಕ್ತ ಸಂಸ್ಥಾನದ ಅರ್ಧದಷ್ಟು. ಆದರೆ ಜನಸಂಖ್ಯೆ 1941 ಗಣತಿಯ ಪ್ರಕಾರ 389 ಮಿಲಿಯನ್. ಈಗ 40 ವರ್ಷದಲ್ಲಿ 60 ಮಿಲಿಯನ್ ಪ್ರಜಾ ಸಂಖ್ಯೆ ಹೆಚ್ಚಾಗಿರುವುದನ್ನು ನೋಡಿದರೆ ಜನಸಂಖ್ಯೆ ದಿನೇದಿನೇ ಹೆಚ್ಚುತ್ತಿರುವುದು. ಭಾರತದ ಸೆಂಪಸ್ಸು ವ್ಯವಸಾಯವೆಂದು ಹೇಳಬಹುದು. ಈಚೆಗೆ ಕೈಗಾರಿಕೆ ಹೆಚ್ಚಿದೆ ಎಂದು ಹೇಳಬಹುದಾದರೂ ಈಗಲೂ ಶೇಕಡ 89 ರಂತೆ ವ್ಯವಸಾಯದಿಂದಲೇ ಜೀವಿಸುವರು. ಇವರು ಕೈಗಾರಿಕೆಯಿಂದ ಜೀವಿಸುತ್ತಿರಬಹುದು. 1891 ರಲ್ಲಿ ಶೇಕಡ 61 ಇದ್ದುದು 1931 ರಲ್ಲಿ ಶೇಕಡ 73 ಕ್ಕೆ ಭಾರತೀಯರ ವ್ಯವಸಾಯದಲ್ಲಿ ಕಾಲಿಟ್ಟರು. ಇತರ ದೇಶಗಳಲ್ಲಿ ಹೀಗಿಲ್ಲ. ಜನರು ಬಂಜರುತ್ತ್ವ ವ್ಯವಸಾಯವನ್ನು ಬಿಟ್ಟು ಕೈಗಾರಿಕೆಯ ಕಲಸಕ್ಕೆ ಸೇರುತ್ತಿರುವರು. ಭಾರತದಲ್ಲಿ 120 ಮಿಲಿಯನ್ ಎಕರೆಯಲ್ಲಿ ವ್ಯವಸಾಯವಾಗುತ್ತಿರುವುದು. ಇದಾಲಾಗದ ಬೆಳೆ 400 ಮಿಲಿಯನ್ ಪ್ರಜೆಗಳಿಗೆ ಆಗಬೇಕು. ಇದರಲ್ಲಿ 250 ಮಿಲಿಯನ್ ಎಕರೆಯಲ್ಲಿ ಆಹಾರ ಬೆಳೆಯುವುದು.

ಅಕ್ಕಿಯು ಭಾರತದ ಮುಖ್ಯ ಆಹಾರ. ಶೇಕಡ 70 ರಂತೆ ಅಕ್ಕಿಯನ್ನು ತಿನ್ನುತ್ತಾರೆ. ಜೈನಾ ಬಿಟ್ಟರೆ ಪ್ರಪಂಚದಲ್ಲಿ ಅಕ್ಕಿ ಬೆಳೆಯುವ ಪ್ರದೇಶವೆಂದರೆ ಹಿಂದೂಸ್ಥಾನವೆನ್ನಬಹುದು. ಅಕ್ಕಿ ಬೆಳೆಯು ಈಗ ಅಷ್ಟು ಹೆಚ್ಚುಸಾಗಿ ಆಗುತ್ತಿಲ್ಲ. ಬೆಳೆ ಕಮ್ಮಿಯಾಗುತ್ತಾ ಬರುತ್ತಿದೆ. ಆದರೆ ಪ್ರಜಾ ಸಂಖ್ಯೆ ಮಾತ್ರ ವರ್ಷಕ್ಕೆ ವರ್ಷ 18 ರಂತೆ ಹೆಚ್ಚುತ್ತಿದೆ. ಈಗ ಪ್ರತಿ ಎಕರೆಗೆ ಸೇಕಡ 8 ರಂತೆ ಕಡಮೆಯಾಗಿದೆ. ಜಪಾನಿನಲ್ಲಿ ಈ ಬೆಳೆಯು ಶೇಕಡ 10 ರಂತೆ ಹೆಚ್ಚಿದೆ. ಹಿಂದೂಸ್ಥಾನಕ್ಕೆ ಅಕ್ಕಿ ಸಾಕಾಗುವುದಿಲ್ಲ. ಪ್ರತಿಯೊಬ್ಬರಿಗೆ ವರ್ಷಕ್ಕೆ 205 ಪೌಂಡು ಸಿಕ್ಕುತ್ತಿದ್ದಿತು. ಈಗ 162 ಪೌಂಡುಗಳಿಗೆ ಇಳಿದಿದೆ. ಇದನ್ನು ನೋಡಲು ಭಾರತಕ್ಕೆ ಈಗ ಶೇಕಡ 6-8 ರಂತೆ ಇತರ ಭಾಗದಿಂದ ಅಕ್ಕಿ ಆಮದು ಮಾಡಿಕೊಳ್ಳಬೇಕು. ಬರ್ಮಾ ಜಪಾನಿಯರ ಕೈಲಿ ಸೇರಿದ್ದರಿಂದ ಭಾರತಕ್ಕೆ [illegible] ಬರುವುದು ನಿಂತಿತು.

ಗೋಧಿ—

ಗೋಧಿ ಭಾರತದ ಎರಡನೆಯ ಮುಖ್ಯವಾದ ಬೆಳೆ. ಇದು 35 ಮಿಲಿಯನ್ ಎಕರೆಗಳಲ್ಲಿ ವ್ಯವಸಾಯವಾಗಿ, 375 ಮಿಲಿಯನ್ ಬುಷಲ್ ಬೆಳೆಯಾಗುವುದು ಇದು ಜನರಿಗೆ ವರ್ಷಕ್ಕೆ 60 ಪೌಂಡು ಸಾಕಾಗುವುದು. ಈ ಬೆಳೆ ಪೆಚ್ಚಿಲ್ಲ ಸಾಮ್ಯರೂ ಭಾರತದವರಿಗೆ ಇದು ಸಾಕಾಗುವುದು. ಅವದು ಮಾಡುವ ತೊಂದರೆ ಇಲ್ಲ

ಇತರ ಧಾನ್ಯಗಳು

ಭಾರತದಲ್ಲಿ ಇತರ ಧಾನ್ಯಗಳು 60 ಮಿಲಿಯನ್ ಎಕರೆಗಳಲ್ಲಿ ಬೆಳೆಯುವುದು ಭಾರತದಲ್ಲಿ ಕಬ್ಬು ಬೆಳೆಯುವಷ್ಟು ಪ್ರಪಂಚದಲ್ಲಿ ಮತ್ತೆಲ್ಲೂ ಬೆಳೆಯುವುದಿಲ್ಲ. ಈ ವ್ಯವಸಾಯ 4 ಮಿಲಿಯನ್ ಎಕರೆಯಲ್ಲಿ 5 ಮಿಲಿಯನ್ ಸಕ್ಕರೆ ತಯಾರಾಗುವುದು. ಭಾರತಲ್ಲಿ ಹೊಗೆಸೊಪ್ಪು 14,97000 ಎಕರೆಗಳಲ್ಲಿ 1375 ಮಿಲಿಯನ್ ಪೌಂಡು ಬೆಳೆಯುವುದು. ಭಾರತದಲ್ಲಿ ಬೆಳೆಯುವಷ್ಟು ಹೊಗೆಸೊಪ್ಪು ಇನ್ಯಾವ ದೇಶದಲ್ಲಿ ಬೆಳೆಯುವುದಿಲ್ಲ.

ಜಾನುವಾರು—

ಭಾರತದಲ್ಲಿ 310 ಮಿಲಿಯನ್ ಕುರಿ, ಆಡು ಮುಂತಾದ ಜಾನುವಾರುಗಳಿವೆ ಭಾರತ ವ್ಯವಸಾಯವೆಲ್ಲಾ ಹಸು ಎತ್ತುಗಳ ಮೇಲೆ ಬರ್ದಿದೆ. ಭಾರತದ ಜಾನುವಾರುಗಳಿಗೆ ಬೇಕಾದಷ್ಟು ಕುಲ್ಲು ಸಿಗುತ್ತಿಲ್ಲ. ಐದರಲ್ಲಿ ಒಂದು ಭಾಗದ ಜಾನುವಾರುಗಳಿಗೆ ಮೇಯಲು ಹುಲ್ಲಿಲ್ಲ ಎನ್ನಬಹುದು. ಭಾರತದಲ್ಲಿ ಜಾನುವಾರಗಳ ಸಂಖ್ಯೆ ಹೆಚ್ಚಾದ್ದರಿಂದ ಚರ್ಮ ತೊಗಿಲು ಹೆಚ್ಚಾಗಿ ಸಿಗುತ್ತವೆ. 20 ಮಿಲಿಯನ್ ಕೋಣಗಳು, 28 ಮಿಲಿಯನ್ ಆಡು, 19 ಮಿಲಿಯನ್ ಕುರಿ ಇವುಗಳ ಚರ್ಮ ರಫ್ತಾಗುತ್ತದೆ.

(ಮುಂದುವರಿಯುವುದು)

ಮಂಡ್ಯದ ಡಿಸ್ಟ್ರಿಕ್ಟ್ ಸಮ್ಮೇಳನ

ತಾ|| 22-5-43 ರಲ್ಲಿ ಮೈಸೂರು ಸಂಸ್ಥಾನದ ವಿದ್ಯಾಶಾಖೆಯ ಸಚಿವರಾದ ಶ್ರೀಮಾನ್ ಜಿ. ಅಪ್ಪಾಜಿಗೌಡ, ಬಿ.ಎ (ಆನರ್ಸ್) ಅವರು, ಮಂಡ್ಯದ ಡಿಸ್ಟ್ರಿಕ್ಟ್ ಸಮ್ಮೇಳನದ ಪ್ರಾರಂಭೋತ್ಸವವನ್ನು ನೆರವೇರಿಸುವಾಗ್ಗೆ ಮಾಡಿದ ಭಾಷಣದಲ್ಲಿ ಅನೇಕ ಉಪಯುಕ್ತ ವಿಷಯಗಳಿವೆ.

For good printing
Saraswati Printing Press
Lansdowne Buildings, Mysore
Lakshminarasimha Press
Srirampet, Mysore

ಸತ್ಯವಾದಿ ಪತ್ರಿಕೆಗೆ
ಚಂದಾದಾರರಾಗಿರಿ
ತಿಂಗಳಿಗೆ 0—6—0

ಅಕ್ಕರ
ಸಾಮಾಜಿಕ
ಭಾವಪರಿಪೂರ್ಣವಾದ ಕಥೆ
ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇ. ಜ. 1 ಆಣೆ. ಮುಂಗಡ ಕಳುಹಿಸಬೇಕು
ದೊರೆಯುವ ಸ್ಥಳ—
ಸತ್ಯವಾದಿ ಆಫೀಸ್ ಮೈಸೂರು

For All Kinds of
Printing & Binding
The
Satyavadi
Press
Chamarajapuram
Mysore

ಶಕ್ತಿ ಸಾಧನೆಗೆ ಸುಲಭೋಪಾಯವು

ಉಜಾಲ

ಸೇವನೆ ಎಂಬುವುದು ನಿಮ್ಮ ಜ್ಞಾಪಕದಲ್ಲಿರಲಿ

ಅನೇಕರಿಂದ ಪ್ರಶಂಸಿಸಲ್ಪಟ್ಟಿದೆ. ವಸ್ತುಪ್ರದರ್ಶನಗಳಲ್ಲಿ ಪ್ರಾಶಸ್ತ್ಯವನ್ನು ಪಡೆದಿದೆ
ಬೆಲೆ 1 ರೂಪಾಯಿ

ರಣಜಿತ್ ಟಾಕೀಸ್ RANJIT — UJALA
ಪ್ರತಿದಿನ 3 ಆಟಗಳು
ಹಿಂದೀ ಭಾಷೆ

ಸೌಂದರ್ಯ ಸೊಬಗಿನ ತಾರೆ ನಾಸೀಮ್
ಮತ್ತು ನಟಶ್ರೇಷ್ಠ ಪೃಥ್ವೀರಾಜ್
ಪಾತ್ರವಹಿಸಿರುವ

ಉಜಾಲ

ಸಹಾಯಕನಟರು— { ರತ್ನಬಾಯಿ, ಮಿತ್ತಾ, ಮುಫ್ತಾಫ್ ಮುಬಾರಕ್ ಮುಂತಾದವರು